## ತಾಜ್ ಮಹಲ್



ಶಾಲೆಯಲ್ಲಿ ರಮೇಶನಿಗೆ ಟೀಚರ್ ಕೇಳಿದರು, 'ತಾಜ್ ಮಹಲ್ ಎಲ್ಲಿದೆ?' ರಮೇಶ, 'ಆಗ್ರಾದಲ್ಲಿ ಟೀಚರ್' ಎಂದು ಉತ್ತರಿಸಿದ. ಟೀಚರ್, 'ತಪ್ಪು, ಅದು ಬೆಂಗಳೂರಿನಲ್ಲಿದೆ' ಎಂದರು. ರಮೇಶ, 'ಇಲ್ಲ ಮಿಸ್, ಅದು ಆಗ್ರಾದಲ್ಲಿದೆ' ಎಂದ. 'ನಾನು ಹೇಳಿದ್ದನ್ನು ಹೇಳಿಸಿಕೊ, ಅದು ಬೆಂಗಳೂರಿನಲ್ಲೇ ಇದೆ' ಎಂದು ಗದರಿಸಿದರು. ಮನೆಗೆ ಬಂದ ರಮೇಶ ಅಪ್ಪನಿಗೆ ಶಿಕ್ಷಕಿ ತಪ್ಪುತಪ್ಪಾಗಿ ಕಲಿಸುತ್ತಿರುವ ವಿಷಯ ತಿಳಿಸಿದ. ಸಿಟ್ಟಿಗೆದ್ದ ಅಪ್ಪ ಹಲ್ಲು ಕಡಿಯುತ್ತ ಮರುದಿನ ಶಾಲೆಗೆ ಬಂದು ಟೀಚರನ್ನು ವಿಚಾರಿಸಿದ. ಅದಕ್ಕೆ ಟೀಚರ್ ಹೇಳಿದ್ದು, 'ಮೊದಲು ಬಾಕಿಯಿರುವ ನಿಮ್ಮ ಮಗನ ಆರು ತಿಂಗಳ ಫೀಸ್ ಕಟ್ಟಿ. ಎಲ್ಲಿಯವರೆಗೆ ಫೀಸ್ ಕಟ್ಟುವದಿಲ್ಲವೋ ಅಲ್ಲಿಯ ತನಕ ತಾಜ್ ಮಹಲ್ ಬೆಂಗಳೂರಿನಲ್ಲಿಯೇ ಇರುತ್ತದೆ' ಎಂದರು. ಅಪ್ಪ ಮಗ ಬೆಪ್ಪಾಗಿ ನಿಂತರು.

**ಶಿವಲೀಲಾ ಸೊಪ್ಪಿಮಠ**

---



## ಹೃದಯವನ್ನಲ್ಲ!

ಗುಂಡ ಮೂರು ವಾರ ಖಾಸಗಿ ಆಸ್ಪತ್ರೆಯೊಂದರಲ್ಲಿ ಅಡ್ಮಿಟ್ ಆಗಿದ್ದ. ಆಗ ಅಲ್ಲಿದ್ದ ಚಿಕ್ಕ ವಯಸ್ಸಿನ ಚಂದನೆಯ ನರ್ಸ್ ಮೇಲೆ ಆತನಿಗೆ ಪ್ರೇಮಾಂಕುರವಾಯಿತು. 'ನೀನು ನನ್ನ ಹೃದಯ ಕದ್ದಿರುವೆ' ಅಂತ ಅವಳಿಗೊಂದು ಚೀಟಿ ಬರೆದು ಕೊಟ್ಟ. ಓದಿ ಗಾಬರಿಗೊಂಡ ನರ್ಸ್ ಹೇಳಿದಳು, 'ಇಲ್ಲ ಸರ್. ನಾವು ಕದ್ದಿದ್ದು ನಿಮ್ಮ ಕಿಡ್ನಿಗಳನ್ನು! ಹೃದಯವನ್ನಲ್ಲ!'

**ಪ್ರಿಯಾಂಕ ವಿ.ಎಚ್.**